ಮೂಲ ದಾವಾ ಸಂಖ್ಯೆ. 127/2017 ಡಿ ಡಬ್ಲ್ಯೂ 2

(ದಿನಾಂಕ 16-09-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣಿಕರಿಸಲಾಯಿತು.)

ಪಾಟೀ ಸವಾಲುಃ ವಾದಿ ಪರ ಶ್ರೀ ಎ ಕೆ ವಕೀಲರಿಂದಃ-

ದಾವಾ ಜಮೀನು ಸರ್ವೆ ನಂ.140 ಅದು ಚಿಲುಗೋಡು ಗ್ರಾಮದಲ್ಲಿದೆ. ಅದು ನಮ್ಮ ತಂದೆಗೆ ಸಂಬಂಧಿಸಿದ್ದು ಇರುತ್ತದೆ. ನಮ್ಮ ತಂದೆ ಹುಲುಗಪ್ಪ ಇವರಿಗೆ ಸದರಿ ಆಸ್ತಿ ಅವರ ತಂದೆಯಿಂದ ಬಂದಿರುತ್ತದೆ. ಅದಕ್ಕೆ ಸಂಬಂಧಿಸಿದ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ.

ದೊಡ್ಡಕರಿಯಪ್ಪ ಇವರಿಗೆ ಭರಮಮ್ಮ, ಹುಲುಗಪ್ಪ ಮತ್ತು ನಾಗಪ್ಪ 3 ಜನ ಮಕ್ಕಳು. ನಾಗಪ್ಪ, ಹುಲುಗಪ್ಪ ಮತ್ತು ಭರಮಮ್ಮ ಇವರ ನಡುವೆ ಪಾಲುವಿಭಾಗವಾಗಿತ್ತು. ನಮ್ಮ ತಂದೆ ಹುಲುಗಪ್ಪ ಇವರಿಗೆ 3 ಎಕರೆ 40 ಸೆಂಟ್ಸ ಮತ್ತು ಅವರ ಸಹೋದರ ನಾಗಪ್ಪ ಇವರಿಗೆ 3 ಎಕರೆ 40 ಸೆಂಟ್ಸ ಜಮೀನು ಬಂತು. ದೊಡ್ಡ ಕರಿಯಪ್ಪ ಮತ್ತು ಸಣ್ಣ ಕರಿಯಪ್ಪ ಸಹೋದರರು ಸಣ್ಣಕರಿಯಪ್ಪ ಇವರಿಗೆ 3 ಎಕರೆ 40 ಸೆಂಟ್ಸ ಜಮೀನು ಬಂತು. ನನ್ನ ತಂದೆ ಮತ್ತು ನನ್ನ ಚಿಕ್ಕಪ್ಪ ನಾಗಪ್ಪ ತಲಾ 3 ಎಕರೆ 40 ಸೆಂಟ್ಸ ಜಮೀನು ಬಂತು. ಸಣ್ಣ ಕರಿಯಪ್ಪ ಇವನಿಗೆ ಸರ್ವೆ ನಂ.107 ರಲ್ಲಿ 3 ಎಕರೆ 40 ಸೆಂಟ್ಸ ಜಮೀನು ಬಂತು. ದೊಡ್ಡ ಕರಿಯಪ್ಪನ ಹೆಂಡತಿ ಹೆಸರು ನನಗೆ ಗೊತ್ತಿಲ್ಲ. ಸಣ್ಣ ಕರಿಯಪ್ಪನ ಹೆಂಡತಿ ಹೆಸರು ನನಗೆ ಗೊತ್ತಿಲ್ಲ. ನನ್ನ ತಂದೆ ಹುಲುಗಪ್ಪ ನನ್ನ ಹೆಸರಿಗೆ 3 ಎಕರೆ 40 ಸೆಂಟ್ಸ ಜಮೀನು ಕುರಿತು ದಾಖಲೆ ಮಾಡಿಕೊಟ್ಟಿದ್ದಾನೆ. ಅವರು ಯಾವ ದಾಖಲೆ ಮಾಡಿಕೊಟ್ಟಿರುತ್ತಾರೆಂದು ನನಗೆ ಗೊತ್ತಿಲ್ಲ. ನನ್ನ ತಂದೆ ನನಗೆ ಬರೆದುಕೊಟ್ಟ ದಾಖಲೆಯನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. ನಾನು ಸಲ್ಲಿಸಿರುವ ತಕರಾರಿನಲ್ಲಿ ಬರೆದಿರುವ ವಿಚಾರ ನನಗೆ ಗೊತ್ತು ಆ ತಕರಾರಿನಲ್ಲಿ ನನ್ನದು ನಮ್ಮ ತಂದೆ ನನಗೆ ಕೊಟ್ಟಿದ್ದಾರಂತಾ ಬರೆಸಿದ್ದೇನೆ.

ಪತ್ರ, ಪಹಣಿ, ಮ್ಯುಟೇಶನ್ ಇದರ ಬಗ್ಗೆ ಮಾಹಿತಿ ಇಲ್ಲ. ನಾನು ವಿದ್ಯಾಭ್ಯಾಸ ಮಾಡಿಲ್ಲ. ನನ್ನ ತಂದೆ ನನ್ನ ಗಂಡ ಕೊಟ್ರೇಶಪ್ಪ ಇವರಿಗೆ ಜಮೀನು ಕೊಟ್ಟಿದ್ದ ಅದನ್ನು ನಾನು ನನ್ನ ಹೆಸರಿಗೆ ಮಾಡಿಸಿಕೊಂಡಿದ್ದೇನೆ.

ಸಾವಿತ್ರಮ್ಮ ಇವರು ದಾವಾಸ್ತಿಗೆ ಸಂಬಂಧಿಸಿದಂತೆ ದಾಖಲಿಸಿದ ದಾವೆಯ ವಿಚಾರ ನನಗೆ ಗೊತ್ತು. ದಾವಾ ನಡೆಯುವ ಸಮಯದಲ್ಲಿ ನನ್ನ ಗಂಡ ಕೊಟ್ರೇಶಪ್ಪ ಇವರು ನನ್ನ ಹೆಸರಿಗೆ ದಾನಪತ್ರವನ್ನು ಮಾಡಿರುತ್ತಾರೆ. ಈ ದಾನಪತ್ರ ಮಾಡುವ ಸಮಯದಲ್ಲಿ ಬಸವರಾಜ, ನಾನು,

ಮೂಲ ದಾವಾ ಸಂಖ್ಯೆ. 127/2017 ಡಿ ಡಬ್ಲ್ಯೂ 2

ನನ್ನ ಗಂಡ ಹಾಜರಿರುತ್ತೇವೆ. ಬಿ ಎಂ ಪ್ರಕಾಶ್ ಬಿನ್ ಮರುಳಸಿದ್ದಯ್ಯ ನನಗೆ ಗೊತ್ತಿಲ್ಲ. ನನ್ನ ಸಾಕ್ಷಿ ಪ್ರಮಾಣಪತ್ರದಲ್ಲಿ ಬರೆದಿರುವ ವಿಚಾರ ನನಗೆ ಗೊತ್ತಿಲ್ಲ, ಅದು ನನ್ನ ಸಹೋದರ ಬಸವರಾಜನಿಗೆ ಗೊತ್ತು.

ದಾವಾಸ್ತಿಯು ವಾದಿ ಮತ್ತು ಅವರ ಮಕ್ಕಳಿಗೆ ಸೇರಿದ ಆಸ್ತಿಯಾಗಿದ್ದು ಅದನ್ನು ನಾನು ಮತ್ತು ನನ್ನ ಗಂಡ ವಂಚನೆ ಮಾಡುವ ಮೂಲಕ ನಮ್ಮ ಹೆಸರಿಗೆ ಮಾಡಿಕೊಂಡಿರುತ್ತೇವೆಂದರೆ ಸುಳ್ಳು. ದಾವಾಸ್ತಿಗೆ ಸಂಬಂಧಿಸಿದಂತೆ ವಾದಿಯ ತಾಯಿ ವಾದಿಗೆ ಸನ್ 1961 ನೇ ಸಾಲಿನಲ್ಲಿ ದಾಖಲೆ ಮಾಡಿಕೊಟ್ಟಿದ್ದಾಳೆಂದರೆ ಸುಳ್ಳು. ಅಂದಿನಿಂದ ಇಲ್ಲಿಯವರೆಗೆ ವಾದಿ ಮತ್ತು ಅವಳ ಮಕ್ಕಳು ಸ್ವಾಧೀನದಲ್ಲಿರುತ್ತಾಳೆಂದರೆ ಸುಳ್ಳು. ವಾದಿಯರ ಸ್ವಾಧೀನಕ್ಕೆ ನಾನು ಮತ್ತು ನನ್ನ ಗಂಡ ತೊಂದರೆಪಡಿಸಿರುತ್ತೇವೆಂದರೆ ಸರಿಯಲ್ಲ. ವಾದಿಯ ಆಸ್ತಿಯನ್ನು ಕಬಸಲು ನಾವು ದಾಖಲೆ ಸೃಷ್ಟಿ ಮಾಡಿಕೊಂಡಿರುತ್ತೇವೆಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ,

ಸಿವಿಲ್ ಜಡ್ಜ ಮತ್ತು ಜೆ ಎಂ ಎಫ್ ಸಿ.,
ಹಗರಿಬೊಮ್ಮನಹಳ್ಳಿ